**ಓ ಎಸ್ ನಂಃ 10-15**
**ಪಿ ಡಬ್ಲ್ಯೂ ಃ 1**

**ದಿಃ 22-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಎಸ್ ವಕೀಲರಿಂದ**

7. ನಾನು 10ನೇ ತರಗತಿ ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಅಜ್ಜನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಹಂಗಾಮಿ ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತೇನೆ. ನಾನು ಎಷ್ಟನೇ ಇಸವಿಯಿಂದ ವಾಟರ್ ಮ್ಯಾನ್ ಕೆಲಸ ಮಾಡುತ್ತಿದ್ದೇನೆ ಎಂದರೆ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ನಾನು ಮೊದಲು ಚಿಕ್ಕನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಈಗ ನಾನು ಅಜ್ಜನಹಳ್ಳಿ ಗ್ರಾಮ ಪಂಚಾಯ್ತಿಯಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ನಿಜ. 1ನೇ ವಾದಿ ನನ್ನ ಅಕ್ಕ ಎಂದರೆ ನಿಜ. ನರಸಿಂಹಯ್ಯ ನನ್ನ ಅಣ್ಣ ಎಂದರೆ ನಿಜ. ನಾನು ಈ ದಾವೆಯನ್ನು ನನ್ನ ಹಾಗೂ ಉಳಿದ ವಾದಿಗಳ ಪರವಾಗಿ ನಡೆಸುತ್ತಿದ್ದೇನೆ. ಉಳಿದ ವಾದಿಗಳು ಈ ದಾವೆಯನ್ನು ನಡೆಸಲು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ.

8. ನನ್ನ ತಂದೆ ಲಕ್ಷ್ಮೀನರಸಿಂಹಯ್ಯರವರು ವ್ಯವಸಾಯ ಮಾಡುತ್ತಿದ್ದರು. ನರಸಿಂಹಯ್ಯರವರು ಮತ್ತು 1ನೇ ವಾದಿ ವ್ಯವಸಾಯ ಮಾಡುತ್ತಾರೆ. ನಮ್ಮ ಕುಟುಂಬಕ್ಕೂ ಮತ್ತು ಪೂಜಅರಸಯ್ಯರವರ ಕುಟುಂಬಕ್ಕೂ ಯಾವುದೇ ಸಂಬಂದ ಇರುವುದಿಲ್ಲ. ಪೂಜಅರಸಯ್ಯರವರು ಎ ಕೆ ಕಾಲೋನಿ, ಮಾದಿಗರಪಾಳ್ಯದಲ್ಲಿ ವಾಸವಿದ್ದರು ಎಂದರೆ ನಿಜ, ಸಾಕ್ಷಿ ಮುಂದುವರೆದು ಈಗ ಅದು ಸೋಮನಾಥಪುರ ಆಗಿರುತ್ತದೆ ಎಂದು ಹೇಳುತ್ತಾರೆ. ಸೋಮನಾಥಪುರ ದಾಖಲೆ ಗ್ರಾಮ ಆಗಿರುವುದಿಲ್ಲ. ನನ್ನ ಊರು ಅಂಕಯ್ಯನಪಾಳ್ಯ ಎಂದರೆ ನಿಜ. ಅಂಕಯ್ಯನಪಾಳ್ಯ ಮತ್ತು ಮಾದಿಗರಪಾಳ್ಯದ ಮದ್ಯೆ ಅರ್ಧ ಫರ್ಲಾಂಗ್ ದೂರ ಇರುತ್ತದೆ. ಈಗ ಅಂಕಯ್ಯನಪಾಳ್ಯ ಮತ್ತು ಮಾದಿಗರಪಾಳ್ಯ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾವು ಪೂಜಅರಸಯ್ಯರವರ ಜನಾಂಗದವರು ಅಲ್ಲ. ನನಗೆ ಪೂಜಅರಸಯ್ಯರವರ ತಂದೆಯ ಹೆಸರು ಗೊತ್ತಿಲ್ಲ. ಪೂಜಅರಸಯ್ಯರವರ ಹೆಂಡತಿಯ ಹೆಸರು ಸಣ್ಣೋಳಮ್ಮ ಆಗಿರುತ್ತದೆ. ಪೂಜಅರಸಯ್ಯ ಮತ್ತು ಸಣ್ಣೋಳಮ್ಮರವರ ಮಗ ಹನುಮಯ್ಯ ಎಂದರೆ ನಿಜ. ಹನುಮಯ್ಯರವರ ಹೆಂಡತಿಯ ಹೆಸರು ಮುತ್ತಮ್ಮ ಎಂದರೆ ನಿಜ. ಮುತ್ತಮ್ಮರವರು ಎ ಕೆ ಕಾಲೋನಿಯವರಾಗಿದ್ದು ಅವರ ತಂದೆಯ ಹೆಸರು ಚಿಕ್ಕಮುತ್ತಯ್ಯ ಎಂದರೆ ಗೊತ್ತಿಲ್ಲ. ನನ್ನ ಊರಿನಲ್ಲಿ 100 ಮನೆ ಇದ್ದು ಕಾಲೋನಿಯಲ್ಲಿ 25 ಮನೆಗಳಿರುತ್ತವೆ. ಮೊದಲು ನನ್ನ ಊರಿನಲ್ಲಿ ಕಡಿಮೆ ಮನೆಗಳಿದ್ದು ಜನಸಂಖ್ಯೆ ಕೂಡ ಕಡಿಮೆ ಇರುತ್ತದೆ. ನಮ್ಮ ಊರಿನಲ್ಲಿ ಎಷ್ಟು ಜನ ಇರುತ್ತಾರೆಂದು ಕಾಲೋನಿಯವರಿಗೆ ಗೊತ್ತಿದ್ದು ಕಾಲೋನಿಯಲ್ಲಿ ಎಷ್ಟು

ಜನ ಇರುತ್ತಾರೆಂದು ನಮ್ಮ ಊರಿನವರಿಗೆ ಗೊತ್ತಿರುತ್ತದೆ ಎಂದರೆ ನಿಜ. ಈ ವಿಷಯ ನನಗೂ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ವಯಸ್ಸು 48 ವರ್ಷ ಇದ್ದು, ನನಗೆ 30 ವರ್ಷಗಳ ಹಿಂದಿನ ವಿಷಯ ಗೊತ್ತಿತ್ತು. ಚಿಕ್ಕಮುತ್ತಯ್ಯರವರಿಗೆ ಮುತ್ತಮ್ಮ, ತಿಮ್ಮಕ್ಕ, ಸೋಮನಳಯ್ಯ, ಮುತ್ತ, ಸಿದ್ದಪ್ಪ ಎಂಬ ಮಕ್ಕಳು ಇರುತ್ತಾರೆ ಅದು ಗೊತ್ತಾ ಎಂದರೆ ಅದು ಸುಳ್ಳು ಎಂದು ಹೇಳುತ್ತಾರೆ. 1ನೇ ಪ್ರತಿವಾದಿ ಊರಿನಲ್ಲಿರುತ್ತಾರೆ. ಉಳಿದ ಚಿಕ್ಕಮುತ್ತಯ್ಯರವರ ಮಕ್ಕಳು 1ನೇ ಪ್ರತಿವಾದಿಯ ಸಹೋದರ ಸಹೋದರಿಯರು ಎಂದರೆ ಗೊತ್ತಿಲ್ಲ.

9. 1ನೇ ದಾವಾ ಆಸ್ತಿಯನ್ನು ನಾನು ಹಾಗೂ ನನ್ನ ಅಣ್ಣ ಸೇರಿ ಕರಿಯಮ್ಮರವರಿಗೆ ದಾನ ಮಾಡಿರುತ್ತೇವೆ. 1ನೇ ದಾವಾ ಆಸ್ತಿ ನನ್ನ ತಂದೆ ಹಾಗೂ ತಾತನ ಕುಟುಂಬದ್ದು ಅಲ್ಲ ಎಂದರೆ ನಿಜ. 1ನೇ ದಾವಾ ಆಸ್ತಿ ಪೂಜಅರಸಯ್ಯ ರವರ ಕುಟುಂಬದ್ದೂ ಎಂದರೆ ನಿಜ, ಸಾಕ್ಷಿ ಮುಂದುವರೆದು ಅದು ಪೂಜಅರಸಯ್ಯ ಹಾಗೂ ಅವರ ಮಗ ಹನುಮಯ್ಯರವರದ್ದು ಎಂದು ಹೇಳುತ್ತಾರೆ. 2ನೇ ದಾವಾ ಆಸ್ತಿಯನ್ನು ಪೂಜಅರಸಯ್ಯರವರ ಮಗ ಹನುಮಯ್ಯರವರು ನನಗೆ ಹಾಗೂ ನನ್ನ ಅಣ್ಣನಿಗೆ ಕರಾರು ಪತ್ರದ ಮೂಲಕ ಕೊಟ್ಟಿರುತ್ತಾರೆ. 2ನೇ ದಾವಾ ಆಸ್ತಿ 1938-39ರಿಂದ ಸರ್ಕಾರಿ ಪಡಾ ಎಂದು ಬರುತ್ತಿದ್ದು ಯಾರ ಹೆಸರಿನಲ್ಲಿಯೂ ಖಾತೆ ಇರುವುದಿಲ್ಲ ಎಂದರೆ ನಿಜ.

10. ಪಿ ಅಂಡ್ ಎಸ್ ಸಿ ನಂ.5/12ರ ಆದೇಶ ನಮಗೆ ಅನ್ವಯಿಸುವುದಿಲ್ಲ ಆದ ಕಾರಣ ಅದನ್ನು ಪ್ರಶ್ನೆ ಮಾಡಿಲ್ಲ, ಸಾಕ್ಷಿ ಮುಂದುವರೆದು ಸುಳ್ಳು ಆದೇಶ ಆಗಿರುತ್ತದೆ ಅದು ನಮಗೆ ಬಾದ್ಯ ಆಗುವುದಿಲ್ಲ ಎಂದು ಹೇಳುತ್ತಾರೆ. ಪಿ ಅಂಡ್ ಎಸ್ ಸಿ ನಂ.5/12ರ ಆದೇಶ ದಿನಾಂಕಃ 30-06-2012 ದಾವಾ ಆಸ್ತಿಗಳು ಹಾಗೂ ಖಾನೇಷುಮಾರಿ ನಂ 41/41ಕ್ಕೆ ಸಂಬಂದಿಸಿರುತ್ತದೆ ಎಂದರೆ ನಿಜ, ಆದರೆ ಅದು ನಮಗೆ ಬಾಧಕವಾಗುವುದಿಲ್ಲ. ಪಿ ಅಂಡ್ ಎಸ್ ಸಿ ನಂ.5/12ರ ಆದೇಶವನ್ನು ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು ಮಾನ್ಯ ಉಚ್ಚ ನ್ಯಾಯಾಲಯ ವಿಚಾರಣಾ ನ್ಯಾಯಾಲಯದಲ್ಲಿಯೇ ಪ್ರಶ್ನೆ ಮಾಡಬೇಕು ಎಂದು ಆದೇಶವಾಗಿತ್ತು ಎಂದು ಹೇಳುತ್ತಾರೆ. ನಾನು ಪಿ ಅಂಡ್ ಎಸ್ ಸಿ ನಂ.5/12ರ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಸಂ.9940/13-14ರಲ್ಲಿ ಪ್ರಶ್ನೆ ಮಾಡಿರುತ್ತೇನೆ. ಮಾನ್ಯ ನ್ಯಾಯಾಲಯದ ಆದೇಶವನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಹೇಳುವ ಹಾಗೆ ಮಾನ್ಯ ಉಚ್ಚ ನ್ಯಾಯಾಲಯದಿಂದ ಯಾವುದೇ ಆದೇಶವಾಗಿಲ್ಲ ಮತ್ತು ಆ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪಿ ಅಂಡ್ ಎಸ್ ಸಿ ನಂ.5/12ರ ಆದೇಶವನ್ನು ಪ್ರಶ್ನೆ ಮಾಡಿಲ್ಲ ಆದ ಕಾರಣ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪಿ ಅಂಡ್ ಎಸ್ ಸಿ ನಂ.5/12ರ ಆದೇಶದಂತೆ 1ನೇ ದಾವಾ

ಆಸ್ತಿಯ ಕಂದಾಯ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತವೆ ಎಂದರೆ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ 1 ನೇ ದಾವಾ ಆಸ್ತಿಯ ಕಂದಾಯ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದ್ದವು ಎಂದರೆ ಅವುಗಳನ್ನು 1 ನೇ ಪ್ರತಿವಾದಿ ಕಂದಾಯ ಅಧಿಕಾರಿಗಳ ಜೊತೆ ಸೇರಿ ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ.

11. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ದಾವಾ ಆಸ್ತಿ ಮೂಲತಃ ಪೂಜಅರಸಯ್ಯರವರಿಗೆ ಸಂಬಂದಿಸಿರುತ್ತದೆ ಎಂದು ಹೇಳಿರುತ್ತೇವೆ ಎಂದರೆ ಸದರಿ ಆಸ್ತಿಯನ್ನು ಪೂಜಅರಸಯ್ಯರವರು ರಂಗಸ್ವಾಮಿರವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. 1 ನೇ ದಾವಾ ಆಸ್ತಿ ಮೂಲತಃ ನರಸಿಂಹೇಗೌಡ ಬಿನ್ ನರಸಿಂಹೇಗೌಡ ಸೋಲೂರು ಕಸಬಾ ಅವರಿಗೆ ಸಂಬಂದಿಸಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ1 ರಂತೆ 1 ನೇ ದಾವಾ ಆಸ್ತಿ ಮೂಲತಃ ಪೂಜಅರಸಯ್ಯರವರಿಗೆ ಸಂಬಂದಿಸಿರುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಅದನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದು ಹೇಳುತ್ತಾರೆ.

12. 1 ನೇ ದಾವಾ ಆಸ್ತಿಯ ಪೂರ್ವಕ್ಕೆ ಸರ್ವೆ ನಂ 97/5 ಬಾವು ಉಳಿಸಿಕೊಂಡಿರುವ ಜಮೀನು, ಪಶ್ಚಿಮಕ್ಕೆ ಕಾಪಿ ತಿಮ್ಮಯ್ಯರವರ ಜಮೀನು, ಉತ್ತರಕ್ಕೆ ಕರಿಗೌಡರವರ ಜಮೀನು, ದಕ್ಷಿಣಕ್ಕೆ ಗಂಗನರಸಯ್ಯ, ಅಣ್ಣಯ್ಯ ಮತ್ತು ರಂಗಶಾಮಪ್ಪರವರ ಜಮೀನು ಇರುತ್ತದೆಂದು ಹೇಳುತ್ತಾರೆ. ನಿಪಿ1 ರಂತೆ 1 ನೇ ದಾವಾ ಆಸ್ತಿಯ ಪೂರ್ವಕ್ಕೆ ಗುಜ್ಜಾರಯ್ಯ ಹಾಗೂ ಚನ್ನಾರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ದೊಡ್ಡರಂಗ ಹಾಗೂ ಪಾಪರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ, ಉತ್ತರಕ್ಕೆ ಕರಿಗೌಡರವರ ಜಮೀನು ಇರುತ್ತದೆ ಎಂದರೆ ನಿಜ, ದಕ್ಷಿಣಕ್ಕೆ ಗುಂಡಯ್ಯ, ಹಳ್ಳಿಗ ಮತ್ತು ಕರೇಗೌಡರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ 1 ನೇ ದಾವಾ ಆಸ್ತಿಗೆ ಮೇಲೆ ಹೇಳಿದ ಚಕ್ಕುಬಂದಿ ಇರುತ್ತದೆ ಎಂದರೆ ಈ ಬಗ್ಗೆ ನಾನು ನಮ್ಮ ವಕೀಲರಿಗೆ ದಾಖಲೆ ಕೊಟ್ಟು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಿಪಿ1 ರ ವಿಷಯ ಸತ್ಯ ಇರುತ್ತದೆ.

13. ನಿಪಿ1 ರಲ್ಲಿ 2 ನೇ ದಾವಾ ಆಸ್ತಿಗೆ ಸಂಬಂದಿಸಿದಂತೆ ಯಾವುದೇ ವಿಚಾರ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಗೆ ಸಂಬಂದಿಸಿದಂತೆ ನಾನು ಯಾವುದೇ ಕ್ರಯಪತ್ರ ಅಥವಾ ಮೂಲ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಗೆ ಸಂಬಂದಿಸಿದಂತೆ ಪೂಜಅರಸಯ್ಯರವರಿಗೆ ಆದ ಪತ್ರವನ್ನು ಹಾಜರುಪಡಿಸಿರುತ್ತೇನೆ. 2 ನೇ ದಾವಾ ಆಸ್ತಿ ಮೆಣಸಲಿಂಗಯ್ಯರವರಿಂದ ಪೂಜಅರಸಯ್ಯರವರಿಗೆ ಆಗಿರುತ್ತದೆ. 2 ನೇ ದಾವಾ ಆಸ್ತಿ ಪೂಜಅರಸಯ್ಯರವರಿಗೆ ಯಾವಾಗ ಕ್ರಯವಾಗಿರುತ್ತದೆ ನನಗೆ ಗೊತ್ತಿಲ್ಲ. 2 ನೇ ದಾವಾ ಆಸ್ತಿಗೆ

ಸಂಬಂದಿಸಿದಂತೆ ನಾನು ಯಾವುದೇ ಮೂಲ ಪತ್ರಗಳನ್ನು ಹಾಜರುಪಡಿಸದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. 2 ನೇ ದಾವಾ ಆಸ್ತಿಗೆ ತೋರಿಸಿದ ಚಕ್ಕುಬಂದಿಯಲ್ಲಿ ಸರ್ವೆ ನಂ 97/5 ಬರುತ್ತದೆಂದು ತೋರಿಸಲು ಮತ್ತು 2 ನೇ ದಾವಾ ಆಸ್ತಿ ಅಸ್ತಿತ್ವದಲ್ಲಿದೆ ಎಂದು ತೋರಿಸಲು ನಾನು ಕ್ರಯದ ಕರಾರು ಪತ್ರ ಮತ್ತು ಮೃತ್ಯುಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಕ್ರಯದ ಕರಾರು ಪತ್ರವನ್ನು ಹನುಮಯ್ಯರವರು ನನ್ನ ಹಾಗೂ ನನ್ನ ಅಣ್ಣನ ಹೆಸರಿಗೆ ದಿನಾಂಕಃ 10-02-1996 ರಂದು ಬರೆದುಕೊಟ್ಟಿರುತ್ತಾರೆ ಮತ್ತು ಇನ್ನೊಂದು ಕರಾರು ಪತ್ರವನ್ನು ದಿನಾಂಕಃ 30-06-1999 ರಂದು ಬರೆದುಕೊಟ್ಟಿರುತ್ತಾರೆ. ಮೇಲೆ ಹೇಳಿದ ಎರಡು ಕ್ರಯದ ಕರಾರು ಪತ್ರಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ. ಕ್ರಯದ ಕರಾರು ಪತ್ರಗಳ ಆಧಾರದ ಮೇರೆಗೆ ಕ್ರಯಪತ್ರ ಬರೆದುಕೊಡಬೇಕೆಂದು ನಾನು ಹನುಮಯ್ಯರವರ ವಿರುದ್ದ ದಾವೆ ಸಲ್ಲಿಸಿರುವುದಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**